# ಅಧ್ಯಾಯ 1



# ಪೀಠಿಕೆ

## *Introduction*

ನೀವು ಈಗಾಗಲೇ ಸೂಕ್ಷ್ಮ ಅರ್ಥಶಾಸ್ತ್ರದ ಪ್ರಾಥಮಿಕ ಅಧ್ಯಯನಕ್ಕೆ ಪರಿಚಿತರಾಗಿರುವಿರಿ. ನೀವು ತಿಳಿದುಕೊಂಡಿರುವ ಸೂಕ್ಷ್ಮ ಅರ್ಥಶಾಸ್ತ್ರಕ್ಕಿಂತ ಸಮಗ್ರ ಅರ್ಥಶಾಸ್ತ್ರವು ಹೇಗೆ ಭಿನ್ನವಾಗಿದೆ ಎಂಬುದರ ಒಂದು ಸರಳೀಕೃತ ವಿವರಣೆಯೊಂದಿಗೆ ಈ ಅಧ್ಯಾಯವು ಪ್ರಾರಂಭವಾಗುತ್ತದೆ.

ಅರ್ಥಶಾಸ್ತ್ರದಲ್ಲಿ ಉನ್ನತ ವ್ಯಾಸಂಗ ಬಯಸುವವರು, ಸಮಗ್ರ ಅರ್ಥಶಾಸ್ತ್ರದ ಅಧ್ಯಯನಕ್ಕೆ ಇಂದು ಅರ್ಥಶಾಸ್ತ್ರಜ್ಞರು ಬಳಸುತ್ತಿರುವ ಹೆಚ್ಚು ಸಂಕೀರ್ಣವಾದ ವಿಶ್ಲೇಷಣೆಯ ಬಗ್ಗೆ ತಿಳಿಯುವರು. ಆದರೆ ಸಮಗ್ರ ಅರ್ಥಶಾಸ್ತ್ರದ ಅಧ್ಯಯನದ ಮೂಲ ಪ್ರಶ್ನೆಗಳು ಹಾಗೆಯೇ ಉಳಿಯಬಹುದು ಮತ್ತು ವಾಸ್ತವವಾಗಿ ಅದು ಎಲ್ಲಾ ನಾಗರೀಕರಿಗೆ ಸಂಬಂಧಪಟ್ಟ ವ್ಯಾಪಕವಾದ ಆರ್ಥಿಕ ಪ್ರಶ್ನೆಗಳು ಎನ್ನುವುದನ್ನು ಕಾಣುವಿರಿ. ಬೆಲೆಗಳು ಒಟ್ಟಾರೆಯಾಗಿ ಏರುತ್ತದೆಯೋ ಅಥವಾ ಇಳಿಯುತ್ತದೆಯೋ? ಸಮಗ್ರವಾಗಿ ದೇಶದ ಅಥವಾ ಆರ್ಥಿಕತೆಯ ಕೆಲವು ವಲಯಗಳಲ್ಲಿ ಉದ್ಯೋಗದ ಸ್ಥಿತಿಗಳು ಉತ್ತಮಗೊಳ್ಳುತ್ತಿದೆಯೇ ಅಥವಾ ಹದಗೆಡುತ್ತಿದೆಯೇ? ಅರ್ಥವ್ಯವಸ್ಥೆ ಉತ್ತಮವಾಗಿದೆ ಅಥವಾ ಹದೆಗೆಟ್ಟಿದೆ ಎಂಬುದನ್ನು ತೋರಿಸುವ ಸಮಂಜಸವಾದ ಸೂಚಕಗಳಾವುವು? ಆರ್ಥಿಕತೆಯ ಸ್ಥಿತಿಗತಿಗಳನ್ನು ಸುಧಾರಿಸಲು ರಾಜ್ಯವು ಕೈಗೊಳ್ಳಬಹುದಾದ ಅಥವಾ ಜನರು ಕೇಳಬಹುದಾದ ಕ್ರಮಗಳಾವುವು? ಇವುಗಳು ದೇಶದ ಸಮಗ್ರ ಆರ್ಥಿಕತೆಯ ಆರೋಗ್ಯದ ಕುರಿತು ನಾವು ಯೋಚಿಸುವಂತೆ ಮಾಡುವ ಪ್ರಶ್ನೆಗಳಾಗಿವೆ. ಈ ಪ್ರಶ್ನೆಗಳನ್ನು ಸಮಗ್ರ ಅರ್ಥಶಾಸ್ತ್ರದಲ್ಲಿ ಸಂಕೀರ್ಣತೆಯ ವಿವಿಧ ಸ್ತರಗಳಲ್ಲಿ ಪರಿಶೀಲಿಸಲಾಗುತ್ತದೆ.

ಈ ಪುಸ್ತಕದಲ್ಲಿ ಸಮಗ್ರ ಅರ್ಥಶಾಸ್ತ್ರದ ವಿಶ್ಲೇಷಣೆಯ ಕೆಲವು ಮೂಲಭೂತ ತತ್ವಗಳನ್ನು ಪರಿಚಯ ಮಾಡಿಕೊಳ್ಳುವಿರಿ. ಸಾಧ್ಯವಾದಷ್ಟು ಸರಳ ಭಾಷೆಯಲ್ಲಿ ತತ್ವಗಳನ್ನು ವಿವರಿಸಲಾಗಿದೆ. ಕೆಲವೊಮ್ಮೆ ಓದುಗರಿಗೆ ಸ್ವಲ್ಪಮಟ್ಟಿನ ಕಠಿಣತೆಯನ್ನು ಪರಿಚಯಿಸಲು ಪ್ರಾಥಮಿಕ ಬೀಜಗಣಿತವನ್ನು ಬಳಸಲಾಗಿದೆ.

ಒಂದು ದೇಶದ ಅರ್ಥವ್ಯವಸ್ಥೆಯನ್ನು ನಾವು ಸಮಗ್ರವಾಗಿ ಗಮನಿಸಿದಾಗ ಆರ್ಥಿಕತೆಯಲ್ಲಿರುವ ಎಲ್ಲಾ ಸರಕು ಮತ್ತು ಸೇವೆಗಳ ಉತ್ಪಾದನಾ ಮಟ್ಟಗಳು ಒಟ್ಟಾಗಿ ಚಲಿಸುವ ಪ್ರವೃತ್ತಿ ಇದೆಯೆಂದು ಕಂಡುಬರುತ್ತದೆ. ಉದಾಹರಣೆಗೆ: ಆಹಾರ ಧಾನ್ಯಗಳ ಉತ್ಪಾದನಾ ಮಟ್ಟವು ಹೆಚ್ಚಳವನ್ನು ಅನುಭವಿಸಿದರೆ ಅದರ ಜೊತೆ ಸಾಮಾನ್ಯವಾಗಿ ಕೈಗಾರಿಕಾ ಸರಕುಗಳ ಉತ್ಪಾದನಾ ಮಟ್ಟದಲ್ಲೂ ಹೆಚ್ಚಳ ಕಂಡುಬರುತ್ತದೆ. ಕೈಗಾರಿಕಾ ಸರಕುಗಳ ವರ್ಗದಲ್ಲಿಯೂ ಕೂಡಾ ವಿವಿಧ ರೀತಿಯ ಸರಕುಗಳ ಉತ್ಪಾದನೆಯು ಏಕಕಾಲದಲ್ಲಿ ಹೆಚ್ಚಾಗುವ ಅಥವಾ ಕಡಿಮೆಯಾಗುವ ಪ್ರವೃತ್ತಿಯನ್ನು ಹೊಂದಿರುತ್ತದೆ. ಅದೇ ರೀತಿ ವಿವಿಧ ಸರಕು ಮತ್ತು ಸೇವೆಗಳ ಬೆಲೆಗಳು ಏಕಕಾಲದಲ್ಲಿ ಹೆಚ್ಚಾಗುವ ಅಥವಾ ಕಡಿಮೆಯಾಗುವ ಪ್ರವೃತ್ತಿಯನ್ನು ಹೊಂದಿರುತ್ತವೆ. ವಿವಿಧ ಉತ್ಪಾದನಾ ಘಟಕಗಳಲ್ಲಿನ ಉದ್ಯೋಗದ ಮಟ್ಟವು ಕೂಡಾ ಒಟ್ಟಾಗಿ ಏರುವುದನ್ನು ಅಥವಾ ಇಳಿಯುವುದನ್ನೂ ಕೂಡಾ ನಾವು ಗಮನಿಸಬಹುದು.

ಒಂದು ಅರ್ಥವ್ಯವಸ್ಥೆಯ ವಿವಿಧ ಉತ್ಪಾದನಾ ಘಟಕಗಳ ಸಮಗ್ರ ಉತ್ಪಾದನೆಯ ಮಟ್ಟ, ಬೆಲೆಯ ಮಟ್ಟ, ಅಥವಾ ಉದ್ಯೋಗದ ಮಟ್ಟ ಪರಸ್ಪರ ನಿಕಟ ಸಂಬಂಧವನ್ನು ಹೊಂದಿದ್ದರೆ, ಆಗ ಇಡೀ ಆರ್ಥಿಕತೆಯ ವಿಶ್ಲೇಷಣೆಯು ಸಾಪೇಕ್ಷವಾಗಿ ಸುಲಭವಾಗುತ್ತದೆ. ಮೇಲೆ ತಿಳಿಸಿರುವ ಚಲಕಗಳನ್ನು ವೈಯುಕ್ತಿಕ (ಪ್ರತ್ಯೇಕವಾಗಿ) ಮಟ್ಟದಲ್ಲಿ ಪರಿಗಣಿಸುವ ಬದಲಿಗೆ, ನಾವು ಒಂದು ಸರಕನ್ನು ಅರ್ಥವ್ಯವಸ್ಥೆಯೊಳಗೆ ಉತ್ಪಾದಿಸಲಾದ ಎಲ್ಲಾ ಸರಕುಗಳ ಪ್ರತಿನಿಧಿಯಾಗಿ ಪರಿಗಣಿಸಬಹುದು. ಎಲ್ಲಾ ಸರಕು ಮತ್ತು ಸೇವೆಗಳ ಸರಾಸರಿ ಉತ್ಪಾದನೆಗೆ ಸಂವಾದಿಯಾದ ಉತ್ಪಾದನಾ ಮಟ್ಟವನ್ನು

ಈ ಪ್ರಾತಿನಿಧಿಕ ಸರಕು ಹೊಂದಿರುತ್ತದೆ. ಅದೇ ರೀತಿ ಈ ಪ್ರಾತಿನಿಧಿಕ ಸರಕಿನ ಬೆಲೆ ಅಥವಾ ಉದ್ಯೋಗದ ಮಟ್ಟವು ಅರ್ಥವ್ಯವಸ್ಥೆಯ ಸಾರ್ವತ್ರಿಕ ಬೆಲೆ ಮತ್ತು ಉದ್ಯೋಗದ ಮಟ್ಟವನ್ನು ಬಿಂಬಿಸುತ್ತದೆ.

ದೇಶದ ಒಟ್ಟು ಉತ್ಪಾದನೆ ಮತ್ತು ಉದ್ಯೋಗಮಟ್ಟವು ಬೆಲೆಗಳು, ಬಡ್ಡಿದರ, ಕೂಲಿಯದರ, ಲಾಭಗಳು ಇತ್ಯಾದಿ ಲಕ್ಷಣಗಳೊಂದಿಗೆ (ಚಲಕಗಳೆಂದು ಕರೆಯಲಾಗುವ) ಯಾವ ಸಂಬಂಧವನ್ನು ಹೊಂದಿದೆ ಮತ್ತು ಅದಕ್ಕೆ ಏನಾಗುತ್ತದೆ ಎನ್ನುವುದನ್ನು ತಿಳಿದುಕೊಳ್ಳಲು, ಸಾಮಾನ್ಯವಾಗಿ ನಾವು ಒಂದು ಕಾಲ್ಪನಿಕ ಸರಕಿನ ಮೇಲೆ ಗಮನವನ್ನು ಕೇಂದ್ರೀಕರಿಸಿ, ಸಮಗ್ರ ಅರ್ಥಶಾಸ್ತ್ರದ ವಿಶ್ಲೇಷಣೆಯನ್ನು ಸರಳೀಕೃತಗೊಳಿಸುತ್ತೇವೆ. ಮಾರುಕಟ್ಟೆಯಲ್ಲಿ ಕೊಳ್ಳುವ ಮತ್ತು ಮಾರಾಟ ಮಾಡುವ ಅನೇಕ ವಾಸ್ತವಿಕ ಸರಕುಗಳಿಗೆ ಏನಾಗುತ್ತದೆಂಬುದನ್ನು ಅಧ್ಯಯನ ಮಾಡುವುದರಿಂದ ದೂರವಿದ್ದು, ಈ ಸರಳೀಕರಣವನ್ನು ಕೈಗೊಳ್ಳಲು ನಾವು ಶಕ್ತರಾಗಿದ್ದೇವೆ. ಏಕೆಂದರೆ ಸಾಮಾನ್ಯವಾಗಿ ಬೆಲೆಗಳು, ಬಡ್ಡಿಗಳು, ಕೂಲಿ ದರಗಳು ಮತ್ತು ಲಾಭಗಳು ಇತ್ಯಾದಿಗಳು ಒಂದು ಸರಕಿನ ಮೇಲೆ ಯಾವ ಪರಿಣಾಮ ಬೀರುತ್ತದೋ ಹೆಚ್ಚುಕಡಿಮೆ ಅದೇ ರೀತಿಯ ಪರಿಣಾಮ ಇತರೆ ಸರಕುಗಳ ಮೇಲೂ ಬೀರುತ್ತದೆಂದು ನಾವು ನೋಡಬಹುದಾಗಿದೆ. ವಿಶೇಷವಾಗಿ ಈ ಲಕ್ಷಣಗಳು (ಚಲಕಗಳು) ವೇಗವಾಗಿ ಬದಲಾಗಲು ಪ್ರಾರಂಭಿಸಿದಾಗ, ಉದಾಹರಣೆಗೆ ಬೆಲೆಗಳು ಏರಲಾರಂಭಿಸಿದಾಗ (ಹಣದುಬ್ಬರವೆಂದು ಕರೆಯುವ ಸನ್ನಿವೇಶ) ಅಥವಾ ಉದ್ಯೋಗ ಮತ್ತು ಉತ್ಪಾದನಾ ಮಟ್ಟಗಳು ಕೆಳಗಿಳಿಯಲು ಆರಂಭಿಸುವುವೋ (ಆರ್ಥಿಕ ಕುಸಿತದ ಸನ್ನಿವೇಶ), ಆಗ ಎಲ್ಲ ವೈಯಕ್ತಿಕ ಸರಕುಗಳಿಗೂ ಈ ಚಲಕಗಳ ಚಲನೆಯ ಸಾಮಾನ್ಯ ದಿಕ್ಕು ಇಡೀ ಆರ್ಥಿಕತೆಯ ಸಮಗ್ರತೆಗಳ ವಿಷಯದಲ್ಲಿ ಕಾಣುವಂತೆ ಒಂದೇ ತೆರನಾಗಿ ಇರುತ್ತದೆ.

ದೇಶದ ಸಮಗ್ರ ಆರ್ಥಿಕತೆಯು ವಿಶಿಷ್ಟ ವಲಯಗಳಿಂದ ಅತ್ಯುತ್ತಮವಾಗಿ ರಚಿತವಾಗಿರುವುದನ್ನು ಆರ್ಥೈಸಿಕೊಂಡಾಗ, ನಾವು ಕೆಲವೊಮ್ಮೆ ಏಕೆ ಈ ಉಪಯುಕ್ತ ಸರಳೀಕರಣದಿಂದ ದೂರವಿದ್ದೇವೆ ಎನ್ನುವುದನ್ನು ಈ ಕೆಳಗಿನಂತೆ ನೋಡಬಹುದಾಗಿದೆ. ಕೆಲವು ನಿರ್ದಿಷ್ಟ ಉದ್ದೇಶಗಳಿಗೆ, ಆರ್ಥಿಕತೆಯ ಎರಡು ವಲಯಗಳ (ಉದಾ: ಕೃಷಿ ಮತ್ತು ಕೈಗಾರಿಕೆ) ಆಂತರಿಕ ಅವಲಂಬನೆ (ಅಥವಾ ಪೈಪೋಟಿ ಕೂಡಾ) ಅಥವಾ ವಲಯಗಳ (ಕುಟುಂಬ ವಲಯ, ವ್ಯಾವಹಾರಿಕ ವಲಯ, ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಸರಕಾರ) ನಡುವಿನ ಸಂಬಂಧಗಳು, ದೇಶದ ಆರ್ಥಿಕತೆಯ ಕೆಲವು ವಿಷಯಗಳ ಬಗ್ಗೆ ಸಮಗ್ರ ಅರ್ಥವ್ಯವಸ್ಥೆಯನ್ನು ಮಾತ್ರ ನೋಡುವುದಕ್ಕಿಂತ ಉತ್ತಮವಾಗಿ ಅರ್ಥ ಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತವೆ

ವಿವಿಧ ಸರಕುಗಳಿಂದ ದೂರವಾಗಿ ಪ್ರಾತಿನಿಧಿಕ ಸರಕುಗಳ ಮೇಲೆ ಕೇಂದ್ರೀಕರಿಸುವುದು ಅನುಕೂಲವಾಗಬಹುದು, ಆದರೆ ಈ ಪ್ರಕ್ರಿಯೆಯಲ್ಲಿ ನಾವು ವೈಯುಕ್ತಿಕ ಸರಕುಗಳ ಮಹತ್ವದ ವೈಶಿಷ್ಟ್ಯಪೂರ್ಣ ಗುಣಲಕ್ಷಣಗಳನ್ನು ಉದಾಸೀನ ಮಾಡಬಹುದಾಗಿದೆ. ಉದಾಹರಣೆಗೆ ಕೃಷಿ ಮತ್ತು ಕೈಗಾರಿಕಾ ಸರಕುಗಳ ಉತ್ಪಾದನಾ ಸ್ಥಿತಿಗತಿಗಳು ವಿಭಿನ್ನ ಸ್ವರೂಪದ್ದಾಗಿವೆ. ಅಥವಾ ಎಲ್ಲಾ ವಿಧದ ಶ್ರಮಗಳ ಪ್ರತಿನಿಧಿಯಾಗಿ ಒಂದು ವರ್ಗದ ಶ್ರಮವನ್ನು ಪರಿಗಣಿಸಿದರೆ, ಒಂದು ಉದ್ಯಮದ ನಿರ್ವಾಹಕನ ಶ್ರಮ ಮತ್ತು ಉದ್ಯಮದ ಲೆಕ್ಕಿಗನ ಶ್ರಮವನ್ನು ಪ್ರತ್ಯೇಕಿಸಲು ನಾವು ಅಸಮರ್ಥರಾಗುತ್ತೇವೆ. ಆದ್ದರಿಂದ ಹಲವಾರು ಸಂದರ್ಭಗಳಲ್ಲಿ ಒಂದೇ ವರ್ಗದ ಪ್ರಾತಿನಿಧಿಕ ಸರಕಿನ (ಅಥವಾ ಶ್ರಮ, ಅಥವಾ ಉತ್ಪಾದನಾ ತಂತ್ರಜ್ಞಾನ) ಬದಲಿಗೆ ನಾವು ಒಂದು ಸಣ್ಣ ಸಂಖ್ಯೆಯಲ್ಲಿ ವಿವಿಧ ಪ್ರಕಾರದ ಸರಕುಗಳನ್ನು ತೆಗೆದುಕೊಳ್ಳಬಹುದು. ಉದಾಹರಣೆಗೆ ಒಂದು ಅರ್ಥವ್ಯವಸ್ಥೆಯೊಳಗೆ ಉತ್ಪಾದಿಸಲಾಗುತ್ತಿರುವ ಎಲ್ಲಾ ಸರಕುಗಳಲ್ಲಿ ಮೂರು ಸಾಮಾನ್ಯ ಪ್ರಕಾರದ ಸರಕುಗಳನ್ನು ಪ್ರತಿನಿಧಿಯಾಗಿ ತೆಗೆದುಕೊಳ್ಳಬಹುದು: ಕೃಷಿ ಸರಕುಗಳು, ಕೈಗಾರಿಕಾ ಸರಕುಗಳು ಮತ್ತು ಸೇವೆಗಳು. ಈ ಸರಕುಗಳು ವಿಭಿನ್ನವಾದ ಉತ್ಪಾದನಾ ತಂತ್ರಜ್ಞಾನ ಮತ್ತು ವಿಭಿನ್ನ ಬೆಲೆಗಳನ್ನು ಹೊಂದಿರುತ್ತವೆ. ಸಮಗ್ರ ಅರ್ಥಶಾಸ್ತ್ರವು ಈ ವಿಭಿನ್ನ ಸರಕುಗಳ ವೈಯುಕ್ತಿಕ ಉತ್ಪಾದನಾ ಮಟ್ಟಗಳು, ಬೆಲೆಗಳು ಮತ್ತು ಉದ್ಯೋಗದ ಮಟ್ಟಗಳು ಹೇಗೆ ನಿರ್ಧಾರಿತವಾಗುತ್ತದೆ ಎನ್ನುವುದನ್ನು ಕೂಡ ವಿಶ್ಲೇಷಿಸಲು ಪ್ರಯತ್ನಿಸುತ್ತದೆ.

ಇಲ್ಲಿನ ಈ ಚರ್ಚೆಯಿಂದ ಮತ್ತು ಸೂಕ್ಷ್ಮ ಅರ್ಥಶಾಸ್ತ್ರದ ನಿಮ್ಮ ಹಿಂದಿನ ಅಧ್ಯಯನದಿಂದ ನೀವು ಈಗಾಗಲೇ ಸಮಗ್ರ ಅರ್ಥಶಾಸ್ತ್ರವು ಸೂಕ್ಷ್ಮಅರ್ಥಶಾಸ್ತ್ರದಿಂದ ಯಾವ ರೀತಿಯಲ್ಲಿ ಭಿನ್ನವಾಗಿದೆ ಎನ್ನುವುದನ್ನು ತಿಳಿಯಲಾರಂಭಿಸಿರುವಿರಿ. ಸಂಕ್ಷಿಪ್ತವಾಗಿ ಪುನರುಚ್ಚರಿಸುವುದಾದರೆ ಸೂಕ್ಷ್ಮ ಅರ್ಥಶಾಸ್ತ್ರದಲ್ಲಿ ವೈಯುಕ್ತಿಕ

'ಆರ್ಥಿಕ ಏಜೆಂಟ್'ಗಳು (ಬಾಕ್ಸ್ ನೋಡಿ) ಮತ್ತು ಅವುಗಳಿಗೆ ಚಾಲನೆ ನೀಡುವ ಉತ್ತೇಜಕಗಳ ಸ್ವಭಾವವನ್ನು ನೋಡಿರುತ್ತೀರಿ. ಅವುಗಳು ಸೂಕ್ಷ್ಮ (ಸಣ್ಣದು ಎನ್ನುವ ಅರ್ಥ) ಏಜೆಂಟ್‌ಗಳಾಗಿವೆ – ಅಭಿರುಚಿ ಮತ್ತು ಆದಾಯ ನೀಡಲ್ಪಟ್ಟಿರುವಾಗ ಖರೀದಿಸುವ ಸರಕುಗಳ ಆದರ್ಶ ಸಂಯೋಜನೆಗಳನ್ನು ಅನುಕ್ರಮವಾಗಿ ಆಯ್ಕೆ ಮಾಡಿಕೊಳ್ಳುವ ಅನುಭೋಗಿಗಳು ಮತ್ತು ಉತ್ಪಾದಕರು ತಾವು ಉತ್ಪಾದಿಸುವ ಸರಕುಗಳ ವೆಚ್ಚವನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ ಮತ್ತು ಮಾರುಕಟ್ಟೆಗಳಲ್ಲಿ ಅವರು ಪಡೆಯಬಹುದಾದ ಹೆಚ್ಚಿನ ಬೆಲೆಗೆ ಮಾರುವುದರ ಮೂಲಕ ಗರಿಷ್ಠ ಲಾಭ ಗಳಿಸಲು ಪ್ರಯತ್ನಿಸುತ್ತಿರುವ ಉತ್ಪಾದಕರು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸೂಕ್ಷ್ಮ ಅರ್ಥಶಾಸ್ತ್ರವು ವೈಯಕ್ತಿಕ ಮಾರುಕಟ್ಟೆಯ ಬೇಡಿಕೆ ಮತ್ತು ಪೂರೈಕೆಗಳ ಅಧ್ಯಯನವಾಗಿದೆ ಮತ್ತು 'ಆಟಗಾರರು' ಅಥವಾ ನಿರ್ಣಯಗಳನ್ನು ಕೈಗೊಳ್ಳುವವರೂ ಕೂಡ ವ್ಯಕ್ತಿಗಳಾಗಿದ್ದು (ಕೊಳ್ಳುವವರು ಅಥವಾ ಮಾರುವವರು, ಕಂಪನಿಗಳೂ ಕೂಡ) ತಮ್ಮ ಲಾಭವನ್ನು (ಉತ್ಪಾದಕರು ಅಥವಾ ಮಾರಾಟಗಾರರಾಗಿ) ಮತ್ತು ತಮ್ಮ ವೈಯಕ್ತಿಕ ತೃಪ್ತಿ ಅಥವಾ ಯೋಗಕ್ಷೇಮದ ಮಟ್ಟವನ್ನು (ಅನುಭೋಗಿಗಳಾಗಿ) ಗರಿಷ್ಠಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ಕಾಣುತ್ತೇವೆ. ಒಂದು ಬೃಹತ್ ಕಂಪನಿಯು ಸೂಕ್ಷ್ಮ ಅರ್ಥಶಾಸ್ತ್ರದ ವ್ಯಾಪ್ತಿಗೆ ಸೇರುತ್ತದೆ ಎನ್ನುವುದರ ಅರ್ಥವೇನೆಂದರೆ ಅದು ತನ್ನ ಷೇರುದಾರರ ಹಿತಾಸಕ್ತಿಗೆ ತಕ್ಕಂತೆ ವ್ಯವಹರಿಸಬೇಕಾಗುತ್ತದೆ ಮತ್ತು ಇದು ಒಟ್ಟಾರೆ ದೇಶದ ಹಿತಾಸಕ್ತಿಯಾಗಿರಲೇಬೇಕಾದ ಅವಶ್ಯಕತೆ ಇರುವುದಿಲ್ಲ. ಇಡೀ ಆರ್ಥಿಕತೆಯ ಮೇಲೆ ಪರಿಣಾಮ ಬೀರುವ 'ಸಮಗ್ರ' (ದೊಡ್ಡದು ಎಂಬರ್ಥದ) ವಿದ್ಯಮಾನಗಳಾದಂತಹ ಅತಿಪ್ರಸರಣ ಅಥವಾ ನಿರುದ್ಯೋಗಗಳನ್ನು ಸೂಕ್ಷ್ಮ ಅರ್ಥಶಾಸ್ತ್ರದಲ್ಲಿ ಪ್ರಸ್ತಾಪಿಸುವುದೂ ಇಲ್ಲ ಅಥವಾ ದತ್ತವಾದವುಗಳೆಂದೂ ಪರಿಗಣಿಸುವುದಿಲ್ಲ. ಆರ್ಥಿಕತೆಯಲ್ಲಿ ಪ್ರತಿಯೊಂದು ಮಾರುಕಟ್ಟೆಯ ಪೂರೈಕೆ ಮತ್ತು ಬೇಡಿಕೆಗಳ ಸಮತೋಲನವೇ ಸಾಮಾನ್ಯ ಸಮತೋಲನವೆಂದು ಅರ್ಥೈಸಿದಾಗ ಸೂಕ್ಷ್ಮ ಅರ್ಥಶಾಸ್ತ್ರವು ಸಮಗ್ರ ಅರ್ಥಶಾಸ್ತ್ರಕ್ಕೆ ಸಮೀಪವಾಗಿರುತ್ತದೆ.

**ಆರ್ಥಿಕ ಏಜೆಂಟ್‌ಗಳು**

ಆರ್ಥಿಕ ಏಜೆಂಟುಗಳೆಂದರೆ ಆರ್ಥಿಕ ನಿರ್ಣಯಗಳನ್ನು ತೆಗೆದುಕೊಳ್ಳುವ ವ್ಯಕ್ತಿಗಳು ಮತ್ತು ಸಂಸ್ಥೆಗಳು ಎಂದು ನಾವು ಅರ್ಥೈಸುತ್ತೇವೆ. ಅವರು, ಏನು ಮತ್ತು ಎಷ್ಟನ್ನು ಅನುಭೋಗಿಸಬೇಕು ಎನ್ನುವುದನ್ನು ನಿರ್ಧರಿಸುವ ಅನುಭೋಗಿಗಳಾಗಿರಬಹುದು. ಏನು ಮತ್ತು ಎಷ್ಟನ್ನು ಉತ್ಪಾದಿಸಬೇಕು ಎಂದು ನಿರ್ಧರಿಸುವ ಉತ್ಪಾದಕರೂ ಆಗಿರಬಹುದು. ಎಷ್ಟು ವೆಚ್ಚವನ್ನು ಮಾಡಬಹುದು, ಸಾಲಕ್ಕೆ ಎಷ್ಟು ಬಡ್ಡಿ ವಿಧಿಸಬೇಕು, ಎಷ್ಟು ತೆರಿಗೆ ವಿಧಿಸಬೇಕು ಎನ್ನುವ ತೀರ್ಮಾನಗಳನ್ನು ಕೈಕೊಳ್ಳುವ ಸರಕಾರ, ನಿಗಮಗಳು, ಬ್ಯಾಂಕುಗಳು ಮುಂತಾದ ಘಟಕಗಳೂ ಆಗಿರಬಹುದು.

ಸಮಗ್ರ ಅರ್ಥಶಾಸ್ತ್ರವು ಸಮಗ್ರ ಆರ್ಥಿಕತೆಯ ಸ್ಥಿತಿಗತಿಗಳನ್ನು ನಿಭಾಯಿಸಲು ಪ್ರಯತ್ನಿಸುತ್ತದೆ. ಪ್ರತಿ ಮಾರುಕಟ್ಟೆಯಲ್ಲಿ ಕೊಳ್ಳುವವರು ಮತ್ತು ಮಾರಾಟಗಾರರು ತಮ್ಮ ಸ್ವಂತ ಹಿತಾಸಕ್ತಿಗಳ ಅನುಸಾರ ನಿರ್ಣಯಗಳನ್ನು ತೆಗೆದುಕೊಂಡರೆ, ಅರ್ಥಶಾಸ್ತ್ರಜ್ಞರು ಸಮಗ್ರ ಆರ್ಥಿಕತೆಯ ಸಂಪತ್ತು ಮತ್ತು ಯೋಗಕ್ಷೇಮದ ಬಗ್ಗೆ ಪ್ರತ್ಯೇಕವಾಗಿ ವಿಚಾರ ಮಾಡುವ ಅಗತ್ಯವಿಲ್ಲವೆಂದು ಆಧುನಿಕ ಅರ್ಥಶಾಸ್ತ್ರದ ಸ್ಥಾಪಕ ಪಿತಾಮಹ ಆಡಂಸ್ಮಿತ್ ಸೂಚಿಸಿದ್ದಾರೆ. ಆದರೆ ಅರ್ಥಶಾಸ್ತ್ರಜ್ಞರು ಇದರಿಂದಾಚೆಗೆ ನೋಡಬೇಕಾಗುತ್ತದೆಂದು ಕ್ರಮೇಣ ಕಂಡುಕೊಂಡಿದ್ದಾರೆ.

ಅರ್ಥಶಾಸ್ತ್ರಜ್ಞರು ಕಂಡುಕೊಂಡಿರುವುದೇನೆಂದರೆ, ಮೊದಲನೆಯದಾಗಿ, ಕೆಲವು ಸಂದರ್ಭಗಳಲ್ಲಿ ಮಾರುಕಟ್ಟೆಗಳು ಇರಲಿಲ್ಲ ಅಥವಾ ಇರುವುದಕ್ಕೂ ಸಾಧ್ಯವಿರಲಿಲ್ಲ. ಎರಡನೆಯದಾಗಿ ಕೆಲವು ಸಂದರ್ಭಗಳಲ್ಲಿ ಮಾರುಕಟ್ಟೆಗಳು ಅಸ್ತಿತ್ವದಲ್ಲಿದ್ದವು ಆದರೆ ಬೇಡಿಕೆ ಮತ್ತು ಪೂರೈಕೆಯ ಸಮತೋಲವನ್ನು ತರುವಲ್ಲಿ ವಿಫಲಗೊಂಡಿದ್ದವು. ಮೂರನೆಯದಾಗಿ ಮತ್ತು ಅತ್ಯಂತ ಪ್ರಮುಖವಾಗಿ ಬಹುತೇಕ ಸಂದರ್ಭಗಳಲ್ಲಿ ಸಮಾಜವು (ಅಥವಾ ಸರ್ಕಾರ ಅಥವಾ ಇಡೀ ಜನತೆ) ಕೆಲವು ಪ್ರಮುಖ ಸಾಮಾಜಿಕ ಗುರಿಗಳನ್ನು (ಉದ್ಯೋಗ, ಆಡಳಿತ, ರಕ್ಷಣೆ, ಶಿಕ್ಷಣ ಮತ್ತು ಆರೋಗ್ಯಗಳಂತಹ ಕ್ಷೇತ್ರಗಳಲ್ಲಿ) ನಿಸ್ವಾರ್ಥವಾಗಿ ಸಾಧಿಸಬೇಕೆಂದು ನಿರ್ಣಯಿಸಲಾಗುತ್ತಿತ್ತು. ಇದಕ್ಕಾಗಿ ವೈಯಕ್ತಿಕ ಆರ್ಥಿಕ ಏಜೆಂಟ್‌ಗಳು ಸೂಕ್ಷ್ಮ ಆರ್ಥಿಕ ನಿರ್ಣಯಗಳ ಸಮಗ್ರ ಪರಿಣಾಮಗಳನ್ನು ತಿದ್ದುಪಡಿ ಮಾಡುವ ಅವಶ್ಯಕತೆ ಉಂಟಾಯಿತು. ಈ ಉದ್ದೇಶಗಳಿಗಾಗಿ

ಸಮಗ್ರ ಅರ್ಥಶಾಸ್ತ್ರದ ವಿದ್ವಾಂಸರು ಹಣದ ಪೂರೈಕೆ, ಬಡ್ಡಿದರ, ಕೂಲಿ, ಉದ್ಯೋಗ ಮತ್ತು ಉತ್ಪನ್ನಗಳಲ್ಲಿ ಬದಲಾವಣೆಗಳನ್ನು ತರುವುದಕ್ಕಾಗಿ ಮಾರುಕಟ್ಟೆಯಲ್ಲಿ ತೆರಿಗೆ ನೀತಿ ಮತ್ತು ಇತರೆ ಮುಂಗಡ ಪತ್ರದ ನೀತಿಗಳ ಪರಿಣಾಮಗಳನ್ನು ಅಧ್ಯಯನ ಮಾಡಬೇಕಾಗಿತ್ತು.



**ಆಡಂ ಸ್ಮಿತ್**

ಆಡಮ್ ಸ್ಮಿತ್ ಅವರನ್ನು ಆಧುನಿಕ ಅರ್ಥಶಾಸ್ತ್ರದ ಸಂಸ್ಥಾಪಕ ಪಿತನೆಂದು ಎಂದು ಪರಿಗಣಿಸಲಾಗಿದೆ. (ಆ ಸಮಯದಲ್ಲಿ ಇದು ರಾಜಕೀಯ ಅರ್ಥಶಾಸ್ತ್ರ ಎಂದು ಕರೆಯಲಾಗುತ್ತಿತ್ತು.) ಅವರು ಸ್ಕಾಟ್ಲೆಂಡಿನ ನಿವಾಸಿ ಆಗಿದ್ದರು ಮತ್ತು ಗ್ಲ್ಯಾಸ್ಗೋ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದರು. ತರಬೇತಿಯಿಂದ ತತ್ವಜ್ಞಾನಿ ಆಗಿದ್ದು, ಅವರ ಪ್ರಸಿದ್ಧ ಕೃತಿಯಾದ (An Enquiry into the nature and couse of the wealth of Nations) – 1776 ('ರಾಷ್ಟ್ರಗಳ ಸಂಪತ್ತಿನ ಸ್ವರೂಪ ಮತ್ತು ಕಾರಣಗಳ ಒಂದು ಪರಿಶೀಲನೆ')ಅನ್ನು ಅರ್ಥಶಾಸ್ತ್ರ ವಿಷಯದ ಮೊದಲ ಪ್ರಮುಖ ಸಮಗ್ರ ಪುಸ್ತಕ ಎಂದು ಪರಿಗಣಿಸಲಾಗಿದೆ. ಪುಸ್ತಕದ ಒಂದು ವಾಕ್ಯವೃಂದ ಹೀಗಿದೆ. 'ನಾವು ನಮ್ಮ ಭೋಜನವನ್ನು ಕಟುಕನ, ಮದ್ಯತಯಾರಕನ, ಬೇಯಿಸುವವನ (ಬೇಕರಿ) ಉದಾರತೆಯಿಂದ ನಿರೀಕ್ಷಿಸುವುದಿಲ್ಲ ಬದಲಾಗಿ ಅವರಿಗೆ ಅವರ ಸಂತ್ವ ಹಿತಾಸಕ್ತಿಯ ಬಗೆಗಿರುವ ಅಭಿಮಾನದಿಂದ. ನಾವು ಅವರ ಮೌನವೀಯತೆಯನ್ನು ಉದ್ದೇಶಿಸಿ ಮಾತನಾಡದೆ, ಅವರ ಸ್ವಪ್ರೇಮದ ಬಗ್ಗೆ ಮಾತನಾಡುತ್ತೇವೆ, ಅವರಲ್ಲಿ ನಮ್ಮ ಸ್ವಂತ ಅಗತ್ಯತೆಗಳ ಬಗ್ಗೆ ಮಾತನಾಡದೆ ಅವರಿಗಾಗುವ ಪ್ರಯೋಜನಗಳ ಬಗ್ಗೆ ಮಾತನಾಡುತ್ತೇವೆ'. ಇದನ್ನು ಮುಕ್ತ ಮಾರುಕಟ್ಟೆಯ ಪರದ ವಕಾಲತ್ತಿಗಾಗಿ ಉದಾಹರಿಸುತ್ತೇವೆ. ಸ್ಮಿತ್ ರವರಗಿಂತ ಮುಂಚೆ ಫ್ರಾನ್ಸಿನ ಫಿಜಿಯೋಕ್ರಾಟ್ಸ್‌ಗಳು ರಾಜಕೀಯ ಅರ್ಥಶಾಸ್ತ್ರದ ಮಹಾನ್ ಚಿಂತಕರಾಗಿದ್ದರು.



ಆದ್ದರಿಂದ ಸಮಗ್ರ ಅರ್ಥಶಾಸ್ತ್ರವು ಸೂಕ್ಷ್ಮ ಅರ್ಥಶಾಸ್ತ್ರದಲ್ಲಿ ಆಳವಾದ ಬೇರುಗಳನ್ನು ಹೊಂದಿದೆ. ಏಕೆಂದರೆ ಸಮಗ್ರ ಅರ್ಥಶಾಸ್ತ್ರವು ಮಾರುಕಟ್ಟೆಗಳಲ್ಲಿನ ಬೇಡಿಕೆ ಮತ್ತು ಪೂರೈಕೆ ಶಕ್ತಿಗಳ ಸಮಗ್ರ ಪರಿಣಾಮಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಆದಾಗ್ಯೂ ಇದರ ಜೊತೆಯಲ್ಲಿಯೇ ಅಗತ್ಯಬಿದ್ದರೆ ಈ ಶಕ್ತಿಗಳನ್ನು ಬದಲಾಯಿಸುವ ನೀತಿಗಳನ್ನು ಪ್ರಯೋಗಿಸಬೇಕಾಗುತ್ತದೆ ಮತ್ತು ಸಮಾಜವು ಮಾರುಕಟ್ಟೆಗಳ ಹೊರಗೆ ಮಾಡಿಕೊಳ್ಳುವ ಆಯ್ಕೆಗಳನ್ನು ಅನುಸರಿಸುವ ಬಗ್ಗೆ ಇದು ವಿಚಾರ ಮಾಡಬೇಕಾಗುತ್ತದೆ. ನಿರುದ್ಯೋಗವನ್ನು ನಿವಾರಿಸುವುದಕ್ಕಾಗಿ ಅಥವಾ ಕಡಿಮೆ ಮಾಡುವುದಕ್ಕಾಗಿ ಎಲ್ಲರಿಗೂ ಶಿಕ್ಷಣ ಮತ್ತು ಪ್ರಾಥಮಿಕ ಆರೋಗ್ಯ ಆರೈಕೆಗಳನ್ನು ಪಡೆಯುವ ಮಾರ್ಗದಲ್ಲಿನ ಸುಧಾರಣೆಗಾಗಿ, ಉತ್ತಮ ಆಡಳಿತವನ್ನು ಒದಗಿಸುವುದಕ್ಕಾಗಿ, ದೇಶಕ್ಕೆ ಸಾಕಷ್ಟು ರಕ್ಷಣೆಯನ್ನು ಒದಗಿಸುವುದು ಮುಂತಾದವುಗಳಿಗಾಗಿ ಭಾರತದಂತಹ ಅಭಿವೃದ್ಧಿಶೀಲ ದೇಶದಲ್ಲಿ ಆಯ್ಕೆಗಳನ್ನು ಮಾಡಿಕೊಳ್ಳಬೇಕಾಗಿದೆ. ನಾವು ಈಗ ಮಾಡಿರುವ ಪಟ್ಟಿಯಲ್ಲಿನ ಸ್ಥಿತಿಗತಿಗಳನ್ನು ವ್ಯವಹರಿಸುವ ರೀತಿಯಿಂದ ಸಮಗ್ರ ಅರ್ಥಶಾಸ್ತ್ರವು ಎರಡು ಸರಳ ಲಕ್ಷಣಗಳನ್ನು ತೋರಿಸುತ್ತದೆ. ಅವುಗಳನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ತಿಳಿಸಲಾಗಿದೆ.


ಮೊದಲನೆಯದಾಗಿ ಸಮಗ್ರ ಆರ್ಥಿಕ ನಿರ್ಣಯಗಳನ್ನು ಕೈಗೊಳ್ಳುವವರು (ಅಥವಾ ಆಟಗಾರರು) ಯಾರು? ಸಮಗ್ರ ಆರ್ಥಿಕ ನೀತಿಗಳನ್ನು ರಾಜ್ಯವು ಸ್ವಯಂ ಆಗಿ ಅಥವಾ ಶಾಸನಾತ್ಮಕ ಸಂಸ್ಥೆಗಳಾದ

ಭಾರತೀಯ ರಿಸರ್ವ್ ಬ್ಯಾಂಕ್(RBI), ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (SEBI) ಮತ್ತು ಇದೇ ರೀತಿಯ ಸಂಸ್ಥೆಗಳಿಂದ ಜಾರಿಗೆ ತರಲಾಗುತ್ತದೆ. ವಿಶೇಷವಾಗಿ ಭಾರತದ ಸಂವಿಧಾನ ಅಥವಾ ಕಾನೂನು ವ್ಯಾಖ್ಯಾನಿಸಿದಂತೆ ಸಾಮಾನ್ಯವಾಗಿ ಇಂತಹ ಪ್ರತಿ ಸಂಸ್ಥೆಯೂ ಒಂದು ಅಥವಾ ಒಂದಕ್ಕಿಂತ ಹೆಚ್ಚು ಗುರಿಗಳನ್ನು ಸಾಧಿಸಬೇಕಾಗುತ್ತದೆ. ಈ ಗುರಿಗಳು ತಮ್ಮ ಲಾಭ ಅಥವಾ ಯೋಗಕ್ಷೇಮವನ್ನು ಗರಿಷ್ಠಗೊಳಿಸುವ ವೈಯುಕ್ತಿಕ ಆರ್ಥಿಕ ಘಟಕಗಳಂತಲ್ಲ. ಸಮಗ್ರ ಆರ್ಥಿಕ ಘಟಕಗಳು ಮೂಲಭೂತವಾಗಿ ವೈಯುಕ್ತಿಕ ನಿರ್ಣಯ ಕೈಗೊಳ್ಳುವವರಿಗಿಂತ ಬೇರೆಯೇ ಆಗಿದೆ.

ಎರಡನೆಯದಾಗಿ ಸಮಗ್ರ ಆರ್ಥಿಕ ನಿರ್ಣಯ ಕೈಗೊಳ್ಳುವವರು ಏನನ್ನು ಮಾಡಲು ಪ್ರಯತ್ನಿಸುತ್ತಾರೆ? ಅವರು ಸ್ಪಷ್ಟವಾಗಿ ಆಗಾಗ ಆರ್ಥಿಕ ಗುರಿಗಳಿಂದಾಚೆಗೆ ಹೋಗಬೇಕು ಮತ್ತು ನಾವು ಮೇಲೆ ಪಟ್ಟಿ ಮಾಡಿದಂತೆ ಅಂತಹ ಸಾರ್ವಜನಿಕ ಅವಶ್ಯಕತೆಗಳಿಗೆ ಆರ್ಥಿಕ ಸಂಪನ್ಮೂಗಳನ್ನು ನಿಯೋಜಿಸುವಂತೆ ನಿರ್ದೇಶಿಸಬೇಕು. ಅಂತಹ ಚಟುವಟಿಕೆಗಳು ವೈಯುಕ್ತಿಕ ಸ್ವ–ಹಿತಾಸಕ್ತಿಗಳನ್ನು ಈಡೇರಿಸುವ ಗುರಿಯನ್ನು ಹೊಂದಿರುವುದಿಲ್ಲ. ಅವುಗಳನ್ನು ಇಡೀ ದೇಶದ ಮತ್ತು ಅದರ ಜನತೆಯ ಯೋಗಕ್ಷೇಮದ ಸಾಧನೆಗಾಗಿ ಅನುಸರಿಸಲಾಗುತ್ತದೆ.

## 1.1 ಸಮಗ್ರ ಅರ್ಥಶಾಸ್ತ್ರದ ಉದಯ *Emergence Of Macroeconomics*

ಬ್ರಿಟಿಷ್ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೇನ್ಸ್ 1936 ರಲ್ಲಿ ತಮ್ಮ ಹೆಸರಾಂತ ಕೃತಿ 'ಉದ್ಯೋಗ, ಬಡ್ಡಿ ಮತ್ತು ಹಣದ ಸಾಮಾನ್ಯ ಸಿದ್ಧಾಂತ'ವನ್ನು ಪ್ರಕಟಿಸಿದ ನಂತರದಲ್ಲಿ ಸಮಗ್ರ ಅರ್ಥಶಾಸ್ತ್ರವು ಅರ್ಥಶಾಸ್ತ್ರದ ಪ್ರತ್ಯೇಕ ಶಾಖೆಯಾಗಿ ಉದಯವಾಯಿತು. ಕೇನ್ಸ್ ರವರಿಗಿಂತ ಮೊದಲು, ಕೆಲಸ ಮಾಡಲು ಸಿದ್ಧರಿರುವ ಎಲ್ಲಾ ಕಾರ್ಮಿಕರು ಪೂರ್ಣ ಉದ್ಯೋಗವನ್ನು ಕಂಡುಕೊಳ್ಳುತ್ತಿದ್ದರು ಮತ್ತು ಎಲ್ಲಾ ಕಾರ್ಖಾನೆಗಳು ತಮ್ಮ ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತವೆ ಎನ್ನುವುದು ಅರ್ಥಶಾಸ್ತ್ರದ ಪ್ರಬಲ ಚಿಂತನೆಯಾಗಿತ್ತು. ಇದನ್ನು **ಸಂಪ್ರದಾಯ ಪಂಥದ ಚಿಂತನೆ** ಎಂದು ಕರೆಯಲಾಗುತ್ತದೆ.




**ಜಾನ್ ಮೇನಾರ್ಡ್ ಕೀನ್ಸ್**

ಜಾನ್ ಮೇನಾರ್ಡ್ ಕೀನ್ಸ್, ಬ್ರಿಟಿಷ್ ಅರ್ಥಶಾಸ್ತ್ರಜ್ಞ, 1883 ರಲ್ಲಿ ಜನಿಸಿದರು. ಅವರು ಯುನೈಟೆಡ್‌ಕಿಂಗ್‌ಡಂ, ಕೇಂಬ್ರಿಡ್ಜ್‌ನ ಕಿಂಗ್ಸ್‌ ಕಾಲೇಜಿನಲ್ಲಿ ಶಿಕ್ಷಣ ಪಡೆದರು ನಂತರ ಅದರ ಮುಖ್ಯಸ್ಥರಾಗಿ ನೇಮಕಗೊಂಡರು. ಅವರ ತೀಕ್ಷ್ಣ ಬುದ್ಧಿಜೀವಿಯಾಗಿದ್ದರಲ್ಲದೇ ಮೊದಲ ಜಾಗತಿಕ ಯುದ್ಧದ ನಂತರದ ವರ್ಷಗಳಲ್ಲಿ ಅಂತರರಾಷ್ಟ್ರೀಯ ರಾಜತಂತ್ರದಲ್ಲಿ ಕ್ರಿಯಾಶೀಲರಾಗಿ ತೊಡಗಿಕೊಂಡಿದ್ದರು. 'ಶಾಂತಿಯ ಆರ್ಥಿಕ ಪರಿಣಾಮಗಳು' (The economic consequences of peace - 1990) ಎಂಬ ತಮ್ಮ ಕೃತಿಯಲ್ಲಿ ಯುದ್ಧ ಶಾಂತಿ ಒಪ್ಪಂದದ ಪಥನದ ಬಗ್ಗೆ ಭವಿಷ್ಯ ನುಡಿದಿದ್ದರು.

ಅವರ ಕೃತಿಯಾದ ಉದ್ಯೋಗ, ಬಡ್ಡಿ, ಮತ್ತು ಹಣದ ಸಾರ್ವತ್ರಿಕ ಸಿದ್ಧಾಂತವು (1936) ಇಪ್ಪತ್ತನೇ ಶತಮಾನದ ಅತ್ಯಂತ ಪ್ರಭಾವಶಾಲಿ ಆರ್ಥಿಕ ಪುಸ್ತಕಗಳಲ್ಲಿ ಒಂದಾಗಿದೆ. ಅವರು ಪ್ರಬಲವಾದ ವಿದೇಶಿ ಕರೆನ್ಸಿಯ ಸಟ್ಟಾವ್ಯಾಪಾರಿಗಳಾಗಿದ್ದರು.

ಆದಾಗ್ಯೂ 1929 ರ ಮಹಾ ಆರ್ಥಿಕ ಕುಸಿತ ಮತ್ತು ನಂತರದ ವರ್ಷಗಳು ಯೂರೋಪ್ ಮತ್ತು ಉತ್ತರ ಅಮೆರಿಕಾ ದೇಶಗಳಲ್ಲಿನ ಉತ್ಪಾದನೆ ಮತ್ತು ಉದ್ಯೋಗದ ಮಟ್ಟವು ಭಾರೀ ಪ್ರಮಾಣದಲ್ಲಿ


ಕಡಿಮೆಯಾದುದ್ದನ್ನು ಕಂಡಿತು. ಇದು ಜಗತ್ತಿನ ಇತರ ದೇಶಗಳ ಮೇಲೂ ಪರಿಣಾಮ ಬೀರಿತು. ಮಾರುಕಟ್ಟೆಯಲ್ಲಿ ಸರಕುಗಳಿಗೆ ಬೇಡಿಕೆ ಕಡಿಮೆಯಿತ್ತು. ಹಲವು ಕಾರ್ಖಾನೆಗಳು ಕೆಲಸವಿಲ್ಲದೇ ಸ್ಥಗಿತವಾಗಿದ್ದವು. ಕಾರ್ಮಿಕರು ಕೆಲಸ ಕಳೆದುಕೊಂಡರು. ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ 1929 ರಿಂದ 1933 ರ ನಡುವೆ ನಿರುದ್ಯೋಗ ದರವು ಶೇ.3 ರಿಂದ ಶೇ.25ಕ್ಕೆ ಏರಿತು (ನಿರುದ್ಯೋಗ ದರವನ್ನು ಹೀಗೆ ವ್ಯಾಖ್ಯಾನಿಸಬಹುದು, ಉದ್ಯೋಗ ರಹಿತ ಜನಸಂಖ್ಯೆ ಮತ್ತು ಕೆಲಸ ಹುಡುಕುತ್ತಿರುವವರ ಸಂಖ್ಯೆಯನ್ನು ದುಡಿಯುತ್ತಿರುವ ಜನಸಂಖ್ಯೆ ಅಥವಾ ಕೆಲಸ ಹುಡುಕುತ್ತಿರುವವರ ಸಂಖ್ಯೆಯಿಂದ ಭಾಗಿಸುವುದು). ಇದೇ ಅವಧಿಯಲ್ಲಿ USA ದ ಒಟ್ಟು ಉತ್ಪನ್ನವು ಶೇ.33ರಷ್ಟು ಕುಸಿಯಿತು. ಈ ಘಟನಾವಳಿಗಳು ಅರ್ಥವ್ಯವಸ್ಥೆಯ ಕಾರ್ಯವಿಧಾನದ ಕುರಿತು ಅರ್ಥಶಾಸ್ತ್ರಜ್ಞರನ್ನು ಹೊಸ ಮಾರ್ಗದಲ್ಲಿ ಯೋಚಿಸುವಂತೆ ಮಾಡಿತು. ಇದು ಅರ್ಥವ್ಯವಸ್ಥೆಯು ಹೊಂದಿರಬಹುದಾದ ದೀರ್ಘಕಾಲೀನ ನಿರುದ್ಯೋಗವನ್ನು ಸೈದ್ಧಾಂತೀಕರಿಸುವ ಮತ್ತು ವಿವರಿಸುವಂತೆ ಮಾಡಿತು. ಈ ದಿಶೆಯಲ್ಲಿ ಕೇನ್ಸ್‌ರವರ ಗ್ರಂಥವು ಒಂದು ಪ್ರಯತ್ನವಾಗಿದೆ. ಇವರ ಹಿಂದಿನವರಂತೆ ಅಲ್ಲದೆ, ಕೇನ್ಸ್‌ರವರ ವಿಧಾನವು ಅರ್ಥವ್ಯವಸ್ಥೆಯ ಕಾರ್ಯವಿಧಾನವನ್ನು ಅದರ ಸಮಗ್ರತೆಯಲ್ಲಿ ಪರೀಕ್ಷಿಸುವುದು ಮತ್ತು ವಿವಿಧ ವಲಯಗಳ ಪರಸ್ಪರಾವಲಂಬನೆಯನ್ನು ಪರೀಕ್ಷಿಸುವುದಾಗಿದೆ. ಹೀಗೆ ಸಮಗ್ರ ಅರ್ಥಶಾಸ್ತ್ರವು ಉದಯವಾಯಿತು.






## 1.2 ಸಮಗ್ರ ಅರ್ಥಶಾಸ್ತ್ರ ಪುಸ್ತಕದ ಪ್ರಸಕ್ತ ಸನ್ನಿವೇಶ
### *Context Of The Present Book Of Macroeconomics*

ಅಧ್ಯಯನ ಮಾಡುವ ಈ ವಿಷಯವು ನಿರ್ದಿಷ್ಟವಾದ ಐತಿಹಾಸಿಕ ಸನ್ನಿವೇಶವನ್ನು ಹೊಂದಿದೆ ಎನ್ನುವುದನ್ನು ನಾವು ನೆನಪಿಟ್ಟುಕೊಳ್ಳಲೇಬೇಕು. ಈ ಪುಸ್ತಕದಲ್ಲಿ ಒಂದು ಬಂಡವಾಳಶಾಹಿ ದೇಶದ ಆರ್ಥಿಕತೆಯನ್ನು ನಾವು ಪರೀಕ್ಷಿಸೋಣ. ಒಂದು ಬಂಡವಾಳಶಾಹಿ ದೇಶದಲ್ಲಿ ಆರ್ಥಿಕ ಚಟುವಟಿಕೆಗಳು ಮುಖ್ಯವಾಗಿ ಬಂಡವಾಳಶಾಹಿ ಉದ್ಯಮಗಳಿಂದ ನಡೆಸಲಾಗುತ್ತದೆ. ಒಂದು ವಿಶಿಷ್ಟವಾದ ಬಂಡವಾಳಶಾಹಿ ಉದ್ಯಮವು ಒಂದು ಅಥವಾ ಹಲವು ಉದ್ಯಮಿಗಳನ್ನು (ಪ್ರಮುಖ ನಿರ್ಣಯಗಳ ಮೇಲೆ ನಿಯಂತ್ರಣ ಹೊಂದಿರುವ ಜನರು ಮತ್ತು ಉದ್ಯಮ/ಸಂಘಟನೆ ಜೊತೆಗಿರುವ ತೊಂದರೆಗಳ ಬಹುಪಾಲನ್ನು ಸಹಿಸಿಕೊಳ್ಳುವವರು) ಹೊಂದಿರುತ್ತದೆ. ಅವರು ಉದ್ಯಮವನ್ನು ನಡೆಸಲು ಅಗತ್ಯವಿರುವ ಬಂಡವಾಳನ್ನು ತಾವಾಗಿಯೇ ಪೂರೈಸಿಕೊಳ್ಳಬಹುದು ಅಥವಾ ಅವರು ಬಂಡವಾಳವನ್ನು ಸಾಲವಾಗಿ ತರಬಹುದು.



ಉತ್ಪಾದನೆಯನ್ನು ಕೈಗೊಳ್ಳಲು ಅವರಿಗೆ **ನೈಸರ್ಗಿಕ ಸಂಪನ್ಮೂಲ**ಗಳೂ ಕೂಡಾ ಅವಶ್ಯಕವಾಗುತ್ತದೆ – ಒಂದು ಭಾಗವನ್ನು ಉತ್ಪಾದನಾ ಪಕ್ರಿಯೆಯಲ್ಲಿ ಬಳಸಲಾಗುತ್ತದೆ (ಉದಾ: ಕಚ್ಚಾ ವಸ್ತುಗಳು) ಮತ್ತು ಒಂದು ಭಾಗ ಸ್ಥಿರವಾಗಿರುತ್ತದೆ (ಉದಾ: ಭೂಮಿ ನಿವೇಶನಗಳು). ಅವರಿಗೆ ಉತ್ಪಾದನೆಯನ್ನು ಕೈಗೊಳ್ಳಲು ಅತ್ಯಂತ ಮುಖ್ಯ ಅಂಶವಾದ ಮಾನವ ಶ್ರಮದ ಅವಶ್ಯಕತೆಯಿದೆ. ಇದನ್ನೇ ನಾವು **ಶ್ರಮ** ಎಂದು ಉಲ್ಲೇಖಿಸೋಣ. ಈ ಮೂರೂ ಉತ್ಪಾದನಾಂಗಗಳ ಅಂದರೆ ಬಂಡವಾಳ, ಭೂಮಿ ಮತ್ತು ಶ್ರಮದ ಸಹಾಯದಿಂದ ಉತ್ಪನ್ನವನ್ನು ಉತ್ಪಾದಿಸಿದ ನಂತರ ಉದ್ಯಮಿಯು ಉತ್ಪನ್ನವನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾನೆ. ಹಾಗೆ ಮಾರಾಟಮಾಡಿ ಗಳಿಸಿದ ಹಣವನ್ನೇ **ಆದಾಯ** ಎಂದು ಕರೆಯುತ್ತಾರೆ. ಭೂಮಿಯು ಸಲ್ಲಿಸಿದ ಸೇವೆಗೆ ಆದಾಯದ ಒಂದು ಭಾಗವನ್ನು ಗೇಣಿಯ ರೂಪದಲ್ಲಿ ಪಾವತಿಸಲಾಗುತ್ತದೆ. ಅದರ ಒಂದು ಭಾಗವನ್ನು ಬಂಡವಾಳಕ್ಕೆ ಬಡ್ಡಿಯ ರೂಪದಲ್ಲಿ ಪಾವತಿಸಲಾಗುತ್ತದೆ ಮತ್ತು ಅದರ ಮತ್ತೊಂದು ಭಾಗವು ಶ್ರಮಕ್ಕೆ **ಕೂಲಿ**ಯ ರೂಪದಲ್ಲಿ ಹೋಗುತ್ತದೆ. ಆದಾಯದ ಉಳಿದ ಭಾಗವು ಉದ್ಯಮಿಗಳ ಗಳಿಕೆಯಾಗಿದೆ, ಅದನ್ನೇ **ಲಾಭ** ಎಂದು ಕರೆಯುತ್ತಾರೆ. ಮುಂದಿನ ಅವಧಿಗೆ ಹೊಸ ಯಂತ್ರಗಳು ಅಥವಾ ಹೊಸ ಕಾರ್ಖಾನೆಗಳನ್ನು ನಿರ್ಮಿಸಲು ಲಾಭವನ್ನು ಆಗಾಗ್ಗೆ ಉತ್ಪಾದಕರು ಬಳಸುತ್ತಾರೆ ಅದರಿಂದ ಉತ್ಪಾದನೆಯು ವಿಸ್ತಾರಗೊಳ್ಳುತ್ತದೆ. ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚುಸುವ ಈ ವೆಚ್ಚಗಳು **ಹೂಡಿಕೆ ವೆಚ್ಚ**ಕ್ಕೆ ಉದಾಹರಣೆಯಾಗಿದೆ.

ಸಂಕ್ಷಿಪ್ತವಾಗಿ, ಯಾವ ಆರ್ಥಿಕತೆಯಲ್ಲಿ ಬಹುತೇಕ ಆರ್ಥಿಕ ಚಟುವಟಿಕೆಗಳು ಈ ಕೆಳಗಿನ ಲಕ್ಷಣಗಳನ್ನು ಹೊಂದಿರುತ್ತದೆಯೋ ಅದನ್ನು ಒಂದು ಬಂಡವಾಳ ಆರ್ಥಿಕತೆಯೆಂದು ವಾಖ್ಯಾನಿಸಬಹುದು. (ಎ) ಉತ್ಪಾದನಾ ಸಾಧನಗಳ ಖಾಸಗಿ ಒಡೆತನವಿರುತ್ತದೆ (ಬಿ) ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಮಾರುವ ಉದ್ದೇಶಕ್ಕಾಗಿ ಉತ್ಪಾದನೆಯಾಗುತ್ತದೆ (ಸಿ) ಯಾವ ಬೆಲೆಗೆ ಶ್ರಮದ ಮಾರಾಟ ಮತ್ತು ಖರೀದಿ ಆಗುತ್ತದೋ ಅದನ್ನೇ **ಕೂಲಿಯದರ** ಎಂದು ಕರೆಯಲಾಗುತ್ತದೆ. (ಶ್ರಮವನ್ನು ಕೂಲಿಗೆ ಪ್ರತಿಯಾಗಿ ಖರೀದಿಸುವುದಕ್ಕೆ ಮತ್ತು ಮಾರುವುದಕ್ಕೆ **ಕೂಲಿ ಶ್ರಮ** ಎನ್ನಲಾಗುತ್ತದೆ).

ನಾವು ಮೇಲೆ ತಿಳಿಸಿದ ಮೂರು ಮಾನದಂಡಗಳನ್ನು ಜಗತ್ತಿನ ರಾಷ್ಟ್ರಗಳಿಗೆ ಅನ್ವಯಿಸಿದರೆ ಕಳೆದ ಮೂರರಿಂದ ನಾಲ್ಕು ನೂರು ವರ್ಷಗಳಲ್ಲಿ ಬಂಡವಾಳಶಾಹಿ ದೇಶಗಳು ಅಸ್ತಿತ್ವಕ್ಕೆ ಬಂದಿರುವುದನ್ನು ನಾವು ಕಾಣಬಹುದಾಗಿದೆ. ಅದಕ್ಕಿಂತ ಕಟ್ಟುನಿಟ್ಟಾಗಿ ಹೇಳುವುದಾದರೆ, ವರ್ತಮಾನದಲ್ಲೂ ಕೂಡಾ ಉತ್ತರ ಅಮೆರಿಕಾ, ಯೂರೋಪ್ ಮತ್ತು ಏಷ್ಯಾದ ಕೆಲವು ದೇಶಗಳು ಬಂಡವಾಳಶಾಹಿ ದೇಶಗಳ ಅರ್ಹತೆಯನ್ನು ಪಡೆದಿವೆ. ಹಿಂದುಳಿದ ಹಲವು ರಾಷ್ಟ್ರಗಳಲ್ಲಿ ಉತ್ಪಾದನೆಯು (ವಿಶೇಷವಾಗಿ ಕೃಷಿಯಲ್ಲಿ) ರೈತ ಕಟುಂಬಗಳಿಂದಲೇ ನಿರ್ವಹಿಸಲ್ಪಡುತ್ತಿದೆ. ಕೂಲಿ ಕಾರ್ಮಿಕರನ್ನು ಅಪರೂಪಕ್ಕೆ ಬಳಸಿಕೊಳ್ಳಲಾಗುತ್ತದೆ ಮತ್ತು ಬಹುತೇಕ ಶ್ರಮವನ್ನು ಕುಟುಂಬದ ಸದಸ್ಯರು ಅವರಷ್ಟಕ್ಕೆ ಅವರೇ ನಿರ್ವಹಿಸುತ್ತಾರೆ. ಉತ್ಪಾದನೆಯೆಲ್ಲವೂ ಪೂರ್ಣವಾಗಿ ಮಾರುಕಟ್ಟೆಗಾಗಿ ಅಲ್ಲ; ಅದರ ದೊಡ್ಡ ಭಾಗವು ಕುಟುಂಬದವರೇ ಅನುಭೋಗಿಸುತ್ತಾರೆ. ಹಲವು ರೈತರು ಕಾಲಾವಧಿಯಲ್ಲಿ ಬಂಡವಾಳ ದಾಸ್ತಾನಿನ ಗಮನಾರ್ಹ ಏರಿಕೆಯನ್ನು ಅನುಭವಿಸಲಾಗಲಿಲ್ಲ. ಕೆಲವು ಬುಡಕಟ್ಟು ಸಮಾಜಗಳಲ್ಲಿ ಭೂಮಿಯ ಒಡೆತನ ಅಸ್ತಿತ್ವದಲ್ಲಿಲ್ಲ; ಭೂಮಿಯು ಇಡೀ ಬುಡಕಟ್ಟಿಗೆ ಸೇರಿರುತ್ತದೆ. ಅಂತಹ ಸಮಾಜಗಳಿಗೆ ಈ ಪುಸ್ತಕದಲ್ಲಿ ನಾವು ಪ್ರಸ್ತುತ ಪಡಿಸಿರುವುದು ಅನ್ವಯಿಸುವುದಿಲ್ಲ. ಇದು ಆದಾಗ್ಯೂ ಹಲವು ಅಭಿವೃದ್ಧಿಶೀಲ ರಾಷ್ಟ್ರಗಳು ಬಂಡವಾಳಶಾಹಿ ತತ್ವದ ಪ್ರಕಾರ ಸಂಘಟಿತವಾದ ಉತ್ಪಾದನಾ ಘಟಕಗಳ ಗಮನಾರ್ಹ ಅಸ್ತಿತ್ವವನ್ನು ಹೊಂದಿವೆ. ಈ ಪುಸ್ತಕದಲ್ಲಿ ಉತ್ಪಾದನಾ ಘಟಕಗಳನ್ನು ಉದ್ಯಮ ಘಟಕಗಳು ಎಂದು ಕರೆಯಲಾಗಿದೆ. ಉದ್ಯಮ ಘಟಕದಲ್ಲಿ ಉದ್ಯಮಿ (ಅಥವಾ ಉದ್ಯಮಿಗಳು) ವ್ಯವಹಾರದ ಕೇಂದ್ರ ಬಿಂದುವಾಗಿರುತ್ತಾರೆ. ಅವರು ಮಾರುಕಟ್ಟೆಯಿಂದ ಕಾರ್ಮಿಕರನ್ನು ಕೂಲಿಗಾಗಿ ತೆಗೆದುಕೊಳ್ಳುತ್ತಾರೆ, ಜೊತೆಗೆ ಬಂಡವಾಳ ಮತ್ತು ಭೂಮಿಯ ಸೇವೆಗಳನ್ನೂ ನೇಮಿಸಿಕೊಳ್ಳುತ್ತಾರೆ. ಈ ಹೂಡುವಳಿಗಳೆಲ್ಲವನ್ನೂ ಬಾಡಿಗೆಗೆ ಪಡೆದ ನಂತರ ಅವರು ಉತ್ಪಾದನೆಯ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಾರೆ. ಸರಕು ಸೇವೆಗಳನ್ನು (ಉತ್ಪಾದನೆ ಎಂದು ಉಲ್ಲೇಖಿಸಲಾಗಿದೆ) ಉತ್ಪಾದಿಸಲು ಅವರಿಗಿರುವ ಉತ್ತೇಜನವೆಂದರೆ ಅವುಗಳನ್ನು ಮಾರಾಟಮಾಡಿ ಲಾಭಗಳಿಸುವುದು. ಈ ಪಕ್ರಿಯೆಯಲ್ಲಿ ಅವರು ಗಂಡಾಂತರಗಳನ್ನು ಮತ್ತು ಅನಿಶ್ಚತೆಗಳನ್ನು ನಿಭಾಯಿಸುತ್ತಾರೆ. ಉದಹರಣೆಗೆ ಅವರು ಉತ್ಪಾದಿಸುತ್ತಿರುವ ಸರಕುಗಳಿಗೆ ಸಾಕಷ್ಟು ಹೆಚ್ಚಿನ ಬೆಲೆಯನ್ನು ಅವರು ಪಡೆಯುವುದಿಲ್ಲ; ಇದು ಅವರು ಗಳಿಸುವ ಲಾಭದ ಇಳಿಕೆಗೆ ಕಾರಣವಾಗುತ್ತದೆ. ಒಂದು ಬಂಡವಾಳಶಾಹಿ ದೇಶದಲ್ಲಿ

ಉತ್ಪಾದನಾಂಗಗಳು ಮಾರುಕಟ್ಟೆಯಲ್ಲಿ ಉತ್ಪನ್ನಗಳ ಉತ್ಪಾದನೆ ಮತ್ತು ಮಾರಾಟದ ಪ್ರಕ್ರಿಯೆಯ ಮೂಲಕ ತಮ್ಮ ಲಾಭವನ್ನು ಗಳಿಸುತ್ತವೆ ಎನ್ನುವುದನ್ನು ಗಮನಿಸಲಾಗುತ್ತದೆ.

ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳೆರಡರಲ್ಲೂ, ಖಾಸಗಿ ಬಂಡವಾಳಶಾಹಿ ವಲಯದ ಹೊರತಾಗಿ, ರಾಜ್ಯವೆಂಬ ಸಂಸ್ಥೆಯು ಅಲ್ಲಿರುತ್ತದೆ. ರಾಜ್ಯದ ಪಾತ್ರವು ಶಾಸನಗಳನ್ನು ರೂಪಿಸುವುದು, ಅವುಗಳನ್ನು ಜಾರಿಗೆ ತರುವುದು ಮತ್ತು ನ್ಯಾಯದಾನ ಮಾಡುತ್ತಿರುವುದನ್ನು ಒಳಗೊಂಡಿರುತ್ತದೆ. ತೆರಿಗೆ ವಿಧಿಸುವುದು ಮತ್ತು ಸಾರ್ವಜನಿಕ ಮೂಲಸೌಕರ್ಯಗಳ ನಿರ್ಮಾಣ, ಶಾಲಾ–ಕಾಲೇಜುಗಳನ್ನು ನಡೆಸುವುದು, ಆರೋಗ್ಯ ಸೇವೆಗಳನ್ನು ಒದಗಿಸುವುದು ಇತ್ಯಾದಿಗಳಿಗೆ ಹಣವನ್ನು ಖರ್ಚು ಮಾಡುವುದಲ್ಲದೆ **ರಾಜ್ಯ**ವು ಉತ್ಪಾದನೆಯನ್ನೂ ನಿರ್ವಹಿಸುವ ಹಲವು ನಿದರ್ಶನಗಳಿವೆ. ನಾವು ದೇಶದ ಅರ್ಥವ್ಯವಸ್ಥೆಯನ್ನು ವಿವರಿಸಲು ಬಯಸುವಾಗ ರಾಜ್ಯದ ಈ ಎಲ್ಲಾ ಆರ್ಥಿಕ ಚಟುವಟಿಕೆಗಳನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ಅನುಕೂಲತೆಗಾಗಿ ರಾಜ್ಯವನ್ನು ಸೂಚಿಸಲು ಸರಕಾರ ಎನ್ನುವ ಪದವನ್ನು ಬಳಸೋಣ.

ಉದ್ಯಮಗಳು ಮತ್ತು ಸರಕಾರವಲ್ಲದೆ **ಕುಟುಂಬ ವಲಯ** ಎಂದು ಕರೆಯಲಾಗುವ ಇನ್ನೊಂದು ಪ್ರಮುಖ ವಲಯ ಅರ್ಥವ್ಯವಸ್ಥೆಯಲ್ಲಿದೆ. ಕುಟುಂಬ ಎಂದರೆ ಅವರ ಸ್ವಂತ ಅನುಭೋಗಕ್ಕೆ ಸಂಬಂಧಿಸಿದ ತೀರ್ಮಾನಗಳನ್ನು ತೆಗೆದುಕೊಳ್ಳುವ ಒಬ್ಬ ವ್ಯಕ್ತಿ ಅಥವಾ ಅನುಭೋಗಕ್ಕೆ ಸಂಬಂಧಿಸಿದ ತೀರ್ಮಾನಗಳನ್ನು ಜಂಟಿಯಾಗಿ ನಿರ್ಧರಿಸುವ ವ್ಯಕ್ತಿಗಳ ಸಮೂಹ. ಕುಟುಂಬವೂ ಕೂಡಾ ಉಳಿಸುತ್ತದೆ ಮತ್ತು ತೆರಿಗೆಯನ್ನು ಪಾವತಿಸುತ್ತದೆ. ಈ ಎಲ್ಲಾ ಚಟುವಟಿಕೆಗಳಿಗೆ ಅವರು ಹಣವನ್ನು ಹೇಗೆ ಪಡೆಯುತ್ತಾರೆ? ಕುಟುಂಬವು ಜನರನ್ನು ಒಳಗೊಂಡಿದೆ ಎನ್ನುವುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಈ ಜನರು ಉದ್ಯಮಗಳಲ್ಲಿ ಕಾರ್ಮಿಕರಾಗಿ ಕೆಲಸ ಮಾಡಿ ಕೂಲಿಯನ್ನು ಸಂಪಾದಿಸುತ್ತಾರೆ. ಅವರು ಸರಕಾರದ ಇಲಾಖೆಗಳಲ್ಲಿ ಕೆಲಸ ಮಾಡಿ ವೇತನವನ್ನು ಗಳಿಸುತ್ತಾರೆ. ಅವರು ಉದ್ಯಮಗಳ ಮಾಲೀಕರಾಗಿರುತ್ತಾರೆ ಮತ್ತು ಲಾಭವನ್ನು ಗಳಿಸುತ್ತಾರೆ. ಕುಟುಂಬದವರಿಂದ ಬರುವ ಬೇಡಿಕೆ ಇಲ್ಲದೆ, ಉದ್ಯಮಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವಂತಹ ಮಾರುಕಟ್ಟೆ ನಿಜವಾಗಿಯೂ ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ. ಮಿಗಿಲಾಗಿ, ಅವರು ಭೂಮಿಯನ್ನು ಗುತ್ತಿಗೆ ನೀಡುವ ಮೂಲಕ ಗೇಣಿಯನ್ನು ಗಳಿಸಬಹುದು ಅಥವಾ ಬಂಡವಾಳವನ್ನು ಸಾಲವಾಗಿ ನೀಡುವ ಮೂಲಕ ಬಡ್ಡಿಯನ್ನು ಗಳಿಸಬಹುದು.

ನಾವು ಇಲ್ಲಿಯವರೆಗೆ ಆಂತರಿಕ ಅರ್ಥವ್ಯವಸ್ಥೆಯಲ್ಲಿನ ಪ್ರಮುಖ ಘಟಕಗಳ (ಆಟಗಾರರ) ಕುರಿತು ವಿವರಿಸಿದ್ದೇವೆ. ಆದರೆ ಜಗತ್ತಿನ ಎಲ್ಲಾ ರಾಷ್ಟ್ರಗಳೂ ಕೂಡಾ ವಿದೇಶಿ ವ್ಯಾಪಾರದಲ್ಲಿ ತೊಡಗಿವೆ. ಬಾಹ್ಯ ವಲಯವು ನಮ್ಮ ಅಧ್ಯಯನದಲ್ಲಿನ ನಾಲ್ಕನೇ ಪ್ರಮುಖ ವಲಯವಾಗಿದೆ. ಬಾಹ್ಯ ವಲಯದೊಂದಿಗಿನ ವ್ಯಾಪಾರವು ಎರಡು ವಿಧದಲ್ಲಿರುತ್ತದೆ.

1. ಸ್ವದೇಶವು ಜಗತ್ತಿನ ಇತರೆ ರಾಷ್ಟ್ರಗಳಿಗೆ ಸರಕುಗಳನ್ನು ಮಾರಬಹುದು. ಇವುಗಳನ್ನೇ **ರಫ್ತುಗಳು** ಎಂದು ಕರೆಯಲಾಗುತ್ತದೆ.
2. ಅರ್ಥವ್ಯವಸ್ಥೆಯು ಜಗತ್ತಿನ ಇತರ ದೇಶಗಳಿಂದ ಕೂಡಾ ಸರಕುಗಳನ್ನು ಖರೀದಿಸಬಹುದು. ಇವುಗಳನ್ನು **ಆಮದುಗಳು** ಎಂದು ಕರೆಯಲಾಗುತ್ತದೆ. ರಫ್ತು ಮತ್ತು ಆಮದುಗಳಲ್ಲದೆ, ಜಗತ್ತಿನ ಇತರ ದೇಶಗಳು ದೇಶೀಯ ಅರ್ಥವ್ಯವಸ್ಥೆಯ ಮೇಲೆ ಇತರ ರೀತಿಯಲ್ಲೂ ಪರಿಣಾಮ ಬೀರುತ್ತವೆ.
3. ಬಂಡವಾಳವು ವಿದೇಶಗಳಿಂದ ದೇಶೀಯ ಅರ್ಥವ್ಯವಸ್ಥೆಯೊಳಗೆ ಹರಿದು ಬರಬಹುದು. ಅಥವಾ ದೇಶೀಯ ಅರ್ಥವ್ಯವಸ್ಥೆಯು ವಿದೇಶಗಳಿಗೆ ಬಂಡವಾಳವನ್ನು ರಫ್ತು ಮಾಡಬಹುದು.

**ಸಾರಾಂಶ *Summary***

ಸಮಗ್ರ ಅರ್ಥಶಾಸ್ತ್ರವು ಒಂದು ಅರ್ಥವ್ಯವಸ್ಥೆಯ ಸಮಗ್ರ ಆರ್ಥಿಕ ಚಲಕಗಳ ಕುರಿತು ಅಧ್ಯಯನ ಮಾಡುತ್ತದೆ. ಒಂದು ಆರ್ಥಿಕತೆಯ ಬೇರೆ ಬೇರೆ ವಲಯಗಳ ನಡುವೆ ಇರಬಹುದಾದ ವಿವಿಧ ಆಂತರಿಕ ಜೋಡಣೆಗಳನ್ನೂ ಕೂಡಾ ಇದು ಪರಿಗಣಿಸುತ್ತದೆ. ಈ ಅಂಶವು, ಆರ್ಥಿಕತೆಯ ಇತರೆ ಎಲ್ಲವೂ ಯಥಾಸ್ಥಿತಿಯಲ್ಲಿದೆ ಎಂದು ಕಲ್ಪಿಸಿಕೊಳ್ಳುತ್ತಾ ಅರ್ಥವ್ಯವಸ್ಥೆಯ ನಿರ್ದಿಷ್ಟ ವಲಯಗಳ ಕಾರ್ಯವಿಧಾನವನ್ನು ಹೆಚ್ಚಾಗಿ ಪರೀಕ್ಷಿಸುವ ಸೂಕ್ಷ್ಮ ಅರ್ಥಶಾಸ್ತ್ರದಿಂದ, ಇದನ್ನು ಪ್ರತ್ಯೇಕಿಸುತ್ತದೆ. ಕೇನ್ಸ್‌ರವರಿಂದಾಗಿ ಸಮಗ್ರ ಅರ್ಥಶಾಸ್ತ್ರವು 1930 ರಲ್ಲಿ ಪ್ರತ್ಯೇಕ ವಿಷಯವಾಗಿ ಉದಯವಾಯಿತು.


ಮುಂದುವರಿದ ದೇಶಗಳ ಆರ್ಥಿಕತೆಗಳಿಗೆ ಭಾರೀ ಹೊಡೆತ ನೀಡಿದ ಮಹಾ ಆರ್ಥಿಕ ಕುಸಿತವು ಕೇನ್ಸ್‌ರವರಿಗೆ, ಅವರ ಬರವಣಿಗೆಗಳಿಗೆ ಸ್ಫೂರ್ತಿಯನ್ನು ಒದಗಿಸಿದೆ. ಈ ಪುಸ್ತಕದಲ್ಲಿ ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯ ಕಾರ್ಯವೈಖರಿಯನ್ನು ನಾವು ಹೆಚ್ಚಾಗಿ ಅಧ್ಯಯನ ಮಾಡೋಣ. ಹೀಗಾಗಿ, ಇದು ಅಭಿವೃದ್ಧಿಶೀಲ ದೇಶಗಳ ಕಾರ್ಯ ವಿಧಾನವನ್ನು ಸಮಗ್ರವಾಗಿ ಹಿಡಿದುಕೊಡಲು ಸಮರ್ಥವಾಗುವುದಿಲ್ಲ. ಸಮಗ್ರ ಅರ್ಥಶಾಸ್ತ್ರವು ಒಂದು ಅರ್ಥವ್ಯವಸ್ಥೆಯನ್ನು ನಾಲ್ಕು ವಲಯಗಳ ಸಂಯೋಜನೆಯಾಗಿ ಕಾಣುತ್ತದೆ, ಅಂದರೆ ಕುಟುಂಬ, ಉದ್ಯಮಗಳು, ಸರಕಾರ ಮತ್ತು ಬಾಹ್ಯ ವಲಯ.

## ಪ್ರಮುಖ ಪರಿಭಾಷೆಗಳು *Key Concepts*

| | |
|---|---|
| ಬಡ್ಡಿಯ ದರ | ಕೂಲಿಯ ದರ |
| ಲಾಭಗಳು | ಆರ್ಥಿಕ ಏಜೆಂಟ್‌ಗಳು ಆಥವಾ ಘಟಕಗಳು |
| ಮಹಾ ಆರ್ಥಿಕ ಕುಸಿತ | ನಿರುದ್ಯೋಗ ದರ |
| ನಾಲ್ಕು ಉತ್ಪಾದನಾಂಗಗಳು | ಉತ್ಪಾದನಾ ಸಾಧನಗಳು |
| ಹೂಡುವಳಿಗಳು (ಆದಾನಗಳು) | ಭೂಮಿ |
| ಶ್ರಮ | ಬಂಡವಾಳ |
| ಉದ್ಯಮ ಶೀಲತೆ | ಹೂಡಿಕೆ ವೆಚ್ಚ |
| ಕೂಲಿಕಾರ್ಮಿಕ | ಬಂಡವಾಳಶಾಹಿ ದೇಶ ಅಥವಾ ಬಂಡವಾಳಶಾಹಿ ಅರ್ಥವ್ಯವಸ್ಥೆ |
| ಉದ್ಯಮಗಳು | ಬಂಡವಾಳಶಾಹಿ ಉದ್ಯಮಗಳು |
| ಉತ್ಪನ್ನ | ಕುಟುಂಬಗಳು |
| ಸರಕಾರ | ಬಾಹ್ಯ ವಲಯ |
| ರಫ್ತುಗಳು | ಆಮದುಗಳು |

## ಅಭ್ಯಾಸಗಳು *Exercises*

1. ಸೂಕ್ಷ್ಮ ಅರ್ಥಶಾಸ್ತ್ರ ಮತ್ತು ಸಮಗ್ರ ಅರ್ಥಶಾಸ್ತ್ರದ ನಡುವಿನ ವತ್ಯಾಸವೇನು?
2. ಬಂಡವಾಳಶಾಹಿ ಅರ್ಥವ್ಯವಸ್ಥೆಯ ಪ್ರಮುಖ ಲಕ್ಷಣಗಳಾವುವು?
3. ಸಮಗ್ರ ಅರ್ಥಶಾಸ್ತ್ರದ ದೃಷ್ಟಿಕೋನದ ಪ್ರಕಾರ ಆರ್ಥಿಕತೆಯ ನಾಲ್ಕು ಪ್ರಮುಖ ವಲಯಗಳನ್ನು ವಿವರಿಸಿ.
4. 1929 ರ ಮಹಾ ಆರ್ಥಿಕ ಕುಸಿತವನ್ನು ವಿವರಿಸಿ



### ಸೂಚಿತ ಅಧ್ಯಯನಗಳು *Suggested Readings*

1. Bhaduri, A., 1990. Macroeconomics: The Dynamics of Commodity Production, pages 1 – 27, Macmillan India Limited, New Delhi.
2. Mankiw, N. G., 2000. Macroeconomics, pages 2 – 14, Macmillan Worth Publishers, New York.